

بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಯುದ್ಧಾನಂತರದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–05–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಹಝ್ರತ್ ಪೈಗಂಬರ್(ಸ)ರ ಕಾಲದ ಕೆಲವು ಯುದ್ಧಗಳ ಪ್ರಸ್ತಾಪ ಮಾಡುತ್ತೇನೆ. ಈ ಸಂಬಂಧವಾಗಿ ಮೊತ್ತಮೊದಲಾಗಿ ಬನೂ ಅಸದ್ ಗೋತ್ರದ ಪಿತೂರಿ ಮತ್ತು **'ಸರಿಯ ಅಬೂಸಲ್ಮಾ'**ದ ಕಾರ್ಯಾಚರಣೆಯ ಪ್ರಸ್ತಾಪ ಮಾಡಲಾಗುವುದು. ಹಝ್ರತ್ ಪೈಗಂಬರ್(ಸ) ಭಾಗಿಯಾಗಿರದೇ ಇತರರನ್ನು ಕಳುಹಿಸಲಾಗುವ ಕಾರ್ಯಾಚರಣೆಯನ್ನು **ಸರಿಯ** ಎಂದು ಕರೆಯಲಾಗುತ್ತದೆ. ಅದರಲ್ಲೂ ಹಝ್ರತ್ ಪೈಗಂಬರ್(ಸ)ರ ಜೀವಿತದ ಕೆಲವು ಮಗ್ಗುಲುಗಳ, ಅವರ ಯುಕ್ತಿಯ, ಮುಸ್ಲಿಮರ ಪ್ರತಿರೋಧದ ವಿಧಾನ, ಶತ್ರುಗಳೊಂದಿಗೆ ಸಹಾನುಭೂತಿ ಮತ್ತು ಹಝ್ರತ್ ಪೈಗಂಬರ್(ಸ)ರ ಮಾದರಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

**ಸರಿಯ ಅಬೂಸಲ್ಮಾ** 4 ಹಿಜರೀ, ಮುಹರ್ರಮ್ ತಿಂಗಳಲ್ಲಿ ಹಝ್ರತ್ ಪೈಗಂಬರ್(ಸ)ರ ತಂದೆಯ ಸಹೋದರಿ ಪುತ್ರ ಮತ್ತು ಹಝ್ರತ್ ಹಂಝ(ರ)ರ ಮಲತಾಯಿ ಸಹೋದರ ಹಝ್ರತ್ ಅಬೂಸಲ್ಮಾ ಬಿನ್ ಅಬ್ದುಲ್‌ಅಸದ್ ಮಖ್‌ಝೂಮಿಯ ನೇತೃತ್ವದಲ್ಲಿ  ನಡೆಯಿತು. ಅವರಿಬ್ಬರೂ ಬದ್ರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಈ ಕಾರ್ಯಾಚರಣೆಯ ಹಿನ್ನೆಲೆ ಹೀಗಿದೆ: ಮುಸ್ಲಿಮರನ್ನು ಬೇಗನೇ ಕೊನೆಗೊಳಿಸಲು ಯೋಜನೆಯನ್ನು ಮಾಡಬಹುದಾಗಿದೆ ಎಂಬ ಯೋಚನೆ ಉಹುದ್ ಯುದ್ಧದ ಅವಸ್ಥೆಗಳು ಮತ್ತು ಘಟನೆಗಳ ಕಾರಣದಿಂದ ಮದೀನದಲ್ಲಿ ನೆಲೆಸಿದ್ದ ಕಪಟವಿಶ್ವಾಸಿಗಳ, ಯಹೂದಿಯರ ಮತ್ತು ಮದೀನದ ಆಸುಪಾಸಿನಲ್ಲಿ ಇದ್ದ ಗೋತ್ರದವರಿಗೆ ಬಂತು. ಹೀಗೆ ಮೊತ್ತಮೊದಲಿಗೆ ಬನೂ ಅಸದ್ ಬಿನ್ ಖುಝೈಮ ಗೋತ್ರವು ಮುಸ್ಲಿಮರ ಮೇಲೆ ದಾಳಿ ನಡೆಸಲು ಯೋಜನೆ ಹಾಕಿತು. ಆ ಗೋತ್ರದ ಸರದಾರ ತುಲೈಹ ಬಿನ್ ಖುವೈಲಿದ್ ಮತ್ತು ಆತನ ಸಹೋದರ ಸಲ್ಮಾ ಇಬ್ಬರೂ ಸೇರಿ ಜನರನ್ನು ಒಟ್ಟು ಸೇರಿಸಿ ಒಂದು ಸೇನೆಯನ್ನು ತಯಾರು ಮಾಡಿದರು. ಮುಸ್ಲಿಮರ ಮೇಲೆ ದಾಳಿ ನಡೆಸದೇ ಇರಲು ಬನೂ ಅಸದಿನ ಒಬ್ಬ ವ್ಯಕ್ತಿಯಾದ ಖೈಸ್ ಬಿನ್ ಹಾರಿಸ್ ಬಿನ್ ಉಮೈರ್ ತನ್ನ ಸಮುದಾಯವನ್ನು ಉಪದೇಶಿಸಿದನು. ಈ ದಾಳಿಯ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ, ಆ ಗೋತ್ರದವರ ದಾಳಿಗೆ ಮುಂಚಿತವಾಗಿ ಸ್ವತಃ ಮುಸ್ಲಿಮರು ತಮ್ಮ ಸಂರಕ್ಷಣೆಗಾಗಿ ಅವರ ಪ್ರದೇಶದ ಮೇಲೆ ದಾಳಿ ನಡೆಸಲು ಹಝ್ರತ್ ಪೈಗಂಬರ್(ಸ)ರ ತೀರ್ಮಾನಿಸಿದರು. ಹಾಗೆ 150 ಸಹಾಬಿಯರನ್ನು ಒಳಗೊಂಡ ಒಂದು ಸೇನೆಯನ್ನು ಆ ಗೋತ್ರಗಳನ್ನು ದಮನಿಸಲು ಹಝ್ರತ್ ಪೈಗಂಬರ್(ಸ) ಕಳುಹಿಸಿದರು.

ಈ ಸೇನೆ ತಮ್ಮ ಕಾರ್ಯಾಚರಣೆಯನ್ನು ರಹಸ್ಯವಾಗಿ ಇರಿಸಿಕೊಂಡು ನಾಲ್ಕು ದಿನಗಳ ಯಾತ್ರೆಗಳ ನಂತರ ಖತನ್ ಪರ್ವತದ ಸಮೀಪವಿರುವ ಬನೂ ಅಸದ್ ಬಿನ್ ಖುಝೈಮದ ಕಾರಂಜಿಯ ಬಳಿಗೆ ತಲುಪಿತು. ಅಲ್ಲಿ ತಲುಪುತ್ತಲೇ ಅವರ ಜಾನುವಾರುಗಳನ್ನು ವಶಪಡಿಸಿಕೊಂಡಿತು ಮತ್ತು ಅವರ ಮೂವರು ಕುರುಬರನ್ನು ಹಿಡಿಗೂಡಿತು. ಇತರರು ಪರಾರಿಯಾಗುವುದರಲ್ಲಿ ಯಶಸ್ವಿಯಾದರು. ಪರಾರಿಯಾದವರು ಈ ದಾಳಿಯ ಬಗ್ಗೆ ಬನೂ ಅಸದ್ ಗೋತ್ರಕ್ಕೆ ಅತಿಶಯೋಕ್ತಿಯಿಂದ ಹೇಳಿಕೊಟ್ಟರು ಮತ್ತು ಮುಸ್ಲಿಮರ ಸಂಖ್ಯೆಯನ್ನು ಬಹಳ ಹೆಚ್ಚಿಸಿ ಹೇಳಿಕೊಂಡರು. ಅದರಿಂದ ಬನೂ ಅಸದ್ ಗೋತ್ರದವರು ಭಯಭೀತರಾಗಿ ಅತ್ತಿತ್ತ ಓಡಿ ಹೋದರು ಹಝ್ರತ್ ಅಬೂ ಸಲ್ಮಾ(ರ) ಅವರನ್ನು ಹುಡುಕಲು ತನ್ನ ಸಂಗಡಿಗರನ್ನು ಕಳುಹಿಸಿದರು. ಆದರೆ ಯಾರೊಂದಿಗೂ ಮುಸ್ಲಿಮರ ಮುಖಾಮುಖಿಯಾಗಲಿಲ್ಲ. ಸಂಪೂರ್ಣ ಯುದ್ಧ ಸಂಪತ್ತಿನಿಂದ ಐದನೇ ಒಂದು ಭಾಗವನ್ನು ಅವರು ಹಝ್ರತ್ ಪೈಗಂಬರ್(ಸ)ರಿಗಾಗಿ ಬೇರ್ಪಡಿಸಿದರು ಮತ್ತು ಉಳಿದ ಸಂಪತ್ತನ್ನು ಸಹಾಬಿಯರ ನಡುವೆ ವಿತರಣೆ ಮಾಡಿದರು. ಹಝ್ರತ್ ಅಬೂಸಲ್ಮಾ(ರ)ರ ನಿಧನದ ಬಗ್ಗೆ ಹೀಗೆ ಬರೆಯಲಾಗಿದೆ: ಅವರು ಮದೀನಕ್ಕೆ ಮರಳಿ ಬಂದ ನಂತರ ಉಹುದ್ ಯುದ್ಧದಲ್ಲಿ ಅವರಿಗೆ ಉಂಟಾದ ಗಾಯ ಪುನಃ ಉಲ್ಬಣಗೊಂಡು ಅವರು ರೋಗಿಯಾದರು ಮತ್ತು ಅದೇ ವರ್ಷ ಜಮಾದಿಯುಲ್ ಆಖಿರ್ ಮೂರರಂದು ನಿಧನಗೊಂಡರು.

ಬನೂ ಅಸದಿನ ಸರದಾರ ತುಲೈಹ ಬಿನ್ ಖುವೈಲಿದ್‌ರ ಪ್ರಸ್ತಾಪವಿದೆ. ಅವರು ಮುಸ್ಲಿಮರಾದರು. ಅನಂತರ ಪುನಃ ಮುರ್ತದ್ ಆದರು. ಮಾತ್ರವಲ್ಲ ಸುಳ್ಳು ಪ್ರವಾದಿತ್ವ ವಾದವನ್ನು ಮಾಡಿಕೊಂಡು ಪಿತೂರಿ ಮತ್ತು ಕಲಹಕ್ಕೆ ಕಾರಣಕರ್ತರಾದರು. ಆದರೆ ಪರಾಜಿತರಾಗಿ ಅರೇಬಿಯದಿಂದ ಓಡಿ ಹೋದರು. ಅನಂತರ ಸ್ವಲ್ಪ ಕಾಲದ ನಂತರ ಪಶ್ಚಾತ್ತಾಪಪಟ್ಟು ಇಸ್ಲಾಮಿನ ಯುದ್ಧಗಳಲ್ಲಿ ಭಾಗವಹಿಸಿ ತನ್ನ ಶೌರ್ಯದ ಕೌಶಲವನ್ನು ತೋರಿಸಿ ಹಿಜರೀ 21ರಲ್ಲಿ ಒಂದು ಯುದ್ಧದಲ್ಲಿ ಶಹೀದಿನ ಪದವಿಯನ್ನು ಪಡೆದರು. ಅಲ್ಲಾಹನು ಅವರಿಗೆ ಶುಭ ಅಂತ್ಯವನ್ನು ಬಯಸಿದ್ದನು. ಆದ್ದರಿಂದ ಅವರಿಗೆ ಇಸ್ಲಾಂ ಸ್ವೀಕಾರ ಮಾಡುವ ಸೌಭಾಗ್ಯ ಲಭಿಸಿತು.

ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಅನೀಸ್(ರ)ರ ಕಾರ್ಯಾಚರಣೆಯ ಪ್ರಸ್ತಾಪವಿದೆ. ಹಝ್ರತ್ ಅಬ್ದುಲ್ಲಾಹ್(ರ) ಬೈಅತ್ ಉಖ್ಬ ಸಾನಿಯದಲ್ಲಿ ಹಾಗೂ ಬದ್ರ್, ಉಹುದ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಸಿರಿಯಾದಲ್ಲಿ

ಹಿಜರೀ 54ರಲ್ಲಿ ಅಥವಾ ಕೆಲವು ವರದಿಗಳ ಪ್ರಕಾರ ಹಿಜರೀ 74ರಲ್ಲಿ ನಿಧನಗೊಂಡರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹಿಜರೀ 4ರ ಮುಹರ್ರಮ್ ತಿಂಗಳ ವಿವರಣೆಯಲ್ಲಿ ಈ ಕಾರ್ಯಾಚರಣೆಯ ಬಗ್ಗೆ ಹೀಗೆ ವಿವರಿಸಿದ್ದಾರೆ: ಖುರೈಶಿಯರ ಕೆರಳಿಸುವಿಕೆ ಮತ್ತು ಉಹುದಿನಲ್ಲಿ ಮುಸ್ಲಿಮರ ತಾತ್ಕಾಲಿಕ ಪರಾಜಯ ಈಗ ಅತ್ಯಂತ ವೇಗವಾಗಿ ತನ್ನ ಅಪಾಯಕರ ಪರಿಣಾಮಗಳನ್ನು ಪ್ರಕಟಿಸುತ್ತಿತ್ತು. ಬನೂ ಅಸದ್ ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡಿದ್ದ ಅದೇ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಮಾಹಿತಿ ಲಭಿಸಿತು: ಬನೂ ಲಹ್‌ಯಾನ್ ಗೋತ್ರದ ಜನರು ತಮ್ಮ ಸರದಾರ ಸುಫ್‌ಯಾನ್ ಬಿನ್ ಖಾಲಿದ್‌ನ ಪ್ರಚೋದನೆಯ ಪ್ರಕಾರ ಮಕ್ಕಾದ ಸಮೀಪದಲ್ಲಿ ಇದ್ದ ತಮ್ಮ ಸ್ವದೇಶವಾದ ಉರ್‌ನ ಎಂಬ ಸ್ಥಳದಲ್ಲಿ ದೊಡ್ಡದಾದೊಂದು ಸೇನೆಯನ್ನು ಒಟ್ಟುಗೂಡಿಸುತ್ತಿದ್ದಾರೆ ಮತ್ತು ಅವರ ಉದ್ದೇಶ ಮದೀನದ ಮೇಲೆ ದಾಳಿ ನಡೆಸುವುದಾಗಿದೆ.

ಸ್ಥಿತಿಗತಿಗಳ ಬಗ್ಗೆ ಅತಿ ಸೂಕ್ಷ್ಮವಾದ ಅರಿವುಳ್ಳ ಮತ್ತು ಅರೇಬಿಯದ ವಿವಿಧ ಗೋತ್ರಗಳ ಸ್ಥಿತಿ ಹಾಗೂ ಅವುಗಳ ಸರದಾರರ ಶಕ್ತಿ ಮತ್ತು ಪ್ರಭಾವದ ಬಗ್ಗೆ ಚೆನ್ನಾಗಿ ಗೊತ್ತಿದ್ದ ಹಝ್ರತ್ ಪೈಗಂಬರ್(ಸ)ರಿಗೆ ಈ ಮಾಹಿತಿ ಲಭಿಸಿದ ಕೂಡಲೇ, ಈ ಎಲ್ಲ ಕಲಹ ಮತ್ತು ಪಿತೂರಿಯು ಬನೂ ಲಹ್‌ಯಾನಿನ ಸರದಾರ ಸುಫ್‌ಯಾನ್ ಬಿನ್ ಖಾಲಿದ್ ಮಾಡಿದ್ದು ಎಂದು ಗೊತ್ತಾಯಿತು. ಆತನು ಮಧ್ಯದಲ್ಲಿ ಇಲ್ಲವೆಂದಾದರೆ ಬನೂ ಲಹ್‌ಯಾನ್ ಗೋತ್ರಕ್ಕೆ ಮದೀನದ ಮೇಲೆ ದಾಳಿ ನಡೆಸುವ ಧೈರ್ಯ ಇರದು ಎಂದು ಅವರಿಗೆ ಗೊತ್ತಿತ್ತು. ಸುಫ್‌ಯಾನ್ ಹೊರತುಪಡಿಸಿ ಈ ರೀತಿಯ ಪ್ರಚೋದನೆಗೆ ನೇತೃತ್ವ ನೀಡುವಂತಹ ಪ್ರಭಾವಶಾಲಿ ವ್ಯಕ್ತಿ ಬೇರೆ ಇಲ್ಲವೆಂದೂ ಅವರಿಗೆ ತಿಳಿದಿತ್ತು. ಆದ್ದರಿಂದ ಸೇನಾ ತುಕಡಿಯನ್ನು ಕಳುಹಿಸುವುದರಿಂದ ಬಡ ಮುಸ್ಲಿಮರು ಸಂಕಷ್ಟಕ್ಕೆ ತುತ್ತಾಗುವ ಹಾಗೂ ದೇಶದಲ್ಲಿ ಕೊಲೆ ಮತ್ತು ರಕ್ತಪಾತದ ಬಾಗಿಲು ತೆರೆಯಲ್ಪಡುವ ಸಾಧ್ಯತೆಯನ್ನು ಮನಗಂಡು ಹಝ್ರತ್ ಪೈಗಂಬರ್(ಸ) ಹೀಗೆ ಯೋಜನೆ ಮಾಡಿಕೊಂಡರು: ಯಾವನಾದರೂ ಒಬ್ಬನು ಹೋಗಿ ಹೊಂಚು ಹಾಕಿ ಈ ಪಿತೂರಿಯ ಕಾರಣಕರ್ತನಾದ ಸುಫ್‌ಯಾನ್ ಬಿನ್ ಖಾಲಿದ್‌ನನ್ನು ವಧಿಸಲಿ.

ಹಾಗೆ ಹಝ್ರತ್ ಪೈಗಂಬರ್(ಸ) ಈ ಉದ್ದೇಶಕ್ಕಾಗಿ ಅಬ್ದುಲ್ಲಾಹ್ ಬಿನ್ ಅನೀಸ್ ಅನ್ಸಾರಿ(ರ)ರನ್ನು ಕಳುಹಿಸಿದರು. ಅಬ್ದುಲ್ಲಾಹ್ ಬಿನ್ ಅನೀಸ್(ರ) ಅತ್ಯಂತ ಚಾಣಕ್ಯದಿಂದ ಬನೂ ಲಹ್‌ಯಾನಿನ ಕ್ಯಾಂಪಿಗೆ ತಲುಪಿದರು. ಗೋತ್ರದವರು ನಿಜವಾಗಿಯೂ ಮದೀನದ ಮೇಲೆ ದಾಳಿ ನಡೆಸುವ ತಯಾರಿಯಲ್ಲಿ ನಿರತರಾಗಿದ್ದರು. ಅಬ್ದುಲ್ಲಾಹ್(ರ) ರಾತ್ರಿ ಸಮಯದಲ್ಲಿ ತಕ್ಕುದಾದ ಸಂದರ್ಭವನ್ನು ನೋಡಿಕೊಂಡು ಸುಫ್‌ಯಾನನ್ನು ವಧಿಸಿದರು. ಬನೂ ಲಹ್‌ಯಾನ್ ಗೋತ್ರದವರಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಅಬ್ದುಲ್ಲಾಹ್(ರ)ರನ್ನು ಹಿಂಬಾಲಿಸಿದರು. ಆದರೆ ಅವರು ತಪ್ಪಿಸಿಕೊಂಡು ಅಲ್ಲಿಂದ ಸುರಕ್ಷಿತವಾಗಿ ಹೊರಟು ಹೋದರು.

ಹಝ್ರತ್ ಪೈಗಂಬರ್(ಸ)ರ ಮುಂದೆ ಅಬ್ದುಲ್ಲಾಹ್ ಬಿನ್ ಅನೀಸ್(ರ) ಬಂದಾಗ ಅವರ ಮುಖವನ್ನು ನೋಡಿದಾಗಲೇ ಅವರು ತಮ್ಮ ಉದ್ದೇಶದಲ್ಲಿ ಯಶಸ್ವಿಯಾಗಿರುವರು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾಯಿತು. ಹಾಗೆ ಅವರನ್ನು ನೋಡುತ್ತಲೇ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಫ್‌ಲಹಲ್ ವಜ್‌ಹು**. ಯಶಸ್ವಿಯಾಗಿದೆ ಎಂದು ಮುಖದಿಂದ ತಿಳಿದು ಬರುತ್ತಿದೆ. ಅಬ್ದುಲ್ಲಾಹ್(ರ) ಬಹಳ ಚೆನ್ನಾಗಿ ಹೀಗೆ ಹೇಳಿದರು: **ಅಫ್‌ಲಹ ವಜ್‌ಹುಕ ಯಾ ರಸೂಲಲ್ಲಾಹ್**. ಯಾ ರಸೂಲಲ್ಲಾಹ್, ಎಲ್ಲ ವಿಜಯ ನಿಮ್ಮದು. ಆಗ ಹಝ್ರತ್ ಪೈಗಂಬರ್(ಸ) ತನ್ನ ಕೈಯಲ್ಲಿದ್ದ ಬಡಿಗೆಯನ್ನು ಅಬ್ದುಲ್ಲಾಹ್(ರ)ರಿಗೆ ಬಹುಮಾನವಾಗಿ ದಯಪಾಲಿಸಿದರು ಮತ್ತು 'ಈ ಬಡಿಗೆ ನಿನಗೆ ಸ್ವರ್ಗದಲ್ಲಿ ಆಸರೆಯಾಗುವುದು' ಎಂದು ಹೇಳಿದರು. ಅಬ್ದುಲ್ಲಾಹ್(ರ) ಆ ಅನುಗ್ರಹೀತ ಬಡಿಗೆಯನ್ನು ಅತ್ಯಂತ ಪ್ರೀತಿ ಮತ್ತು ನಿಷ್ಠೆಯೊಂದಿಗೆ ತನ್ನ ಬಳಿಯಲ್ಲಿ ಇರಿಸಿದರು. ಅದನ್ನು ತನ್ನ ಜೊತೆಗೆ ದಫನ್ ಮಾಡಬೇಕು ಎಂದು ಮರಣ ಸಮಯದಲ್ಲಿ ಅವರು ಉಯಿಲು ಮಾಡಿದರು. ಹಾಗೆಯೇ ಮಾಡಲಾಯಿತು.

ಅಬ್ದುಲ್ಲಾಹ್(ರ) ಯಶಸ್ವಿಯಾಗಿ ಮರಳಿ ಬಂದಾಗ ಹಝ್ರತ್ ಪೈಗಂಬರ್(ಸ) ಸಂತೋಷಪಟ್ಟದ್ದು ಮತ್ತು ಅವರಿಗೆ ನೀಡಿದ ವಿಶಿಷ್ಟ ಬಹುಮಾನದಿಂದ ಗೊತ್ತಾಗುವುದೇನೆಂದರೆ, ಹಝ್ರತ್ ಪೈಗಂಬರ್(ಸ) ಸುಫ್‌ಯಾನ್ ಬಿನ್ ಖಾಲಿದ್‌ನ ಪಿತೂರಿಯನ್ನು ಅತ್ಯಂತ ಅಪಾಯಕಾರಿಯಾಗಿ ಭಾವಿಸುತ್ತಿದ್ದರು ಮತ್ತು ಆತನನ್ನು ವಧಿಸುವುದು ಸಾರ್ವಜನಿಕ ಸುರಕ್ಷೆಗಾಗಿ ಒಂದು ಕಾರುಣ್ಯವಾಗುವುದೆಂದು ಭಾವಿಸುತ್ತಿದ್ದರು ಎಂದಾಗಿದೆ. ಹಝ್ರತ್ ಪೈಗಂಬರ್(ಸ) ಶಾಂತಿಭಂಗ ಮಾಡಿದರು ಮತ್ತು ಮನುಷ್ಯ ಜೀವವನ್ನು ಕೊಂದು ಹಾಕಿದರು ಎಂದು ಶತ್ರುಗಳು ಆಕ್ಷೇಪಿಸುತಾರೆ. ಆದರೆ ಮನುಷ್ಯರ ಜೀವಕ್ಕೆ ಹಝ್ರತ್ ಪೈಗಂಬರ್(ಸ) ನೀಡುತ್ತಿದ್ದ ಬೆಲೆಯ ಮಟ್ಟವೇನೆಂದರೆ, ಶತ್ರು ಗೋತ್ರದ ಜನರ ಜೀವವನ್ನು ಕೂಡ ರಕ್ಷಿಸಲಿಕ್ಕಾಗಿ ಪಿತೂರಿ ಉಂಟುಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಮಾತ್ರ ಕೊಲ್ಲಲು ಅವರು ಯೋಜನೆ ಹಾಕಿದರು. ಇದು ಮಾನುಷಿಕ ಸಹಾನುಭೂತಿಯ ಅತ್ಯುನ್ನತ ಮಟ್ಟವಾಗಿದೆ.

ಇಂದಿನ ತಥಾಕಥಿತ ಲೋಕವು ಕೆಲವು ಜನರನ್ನು ಕೊಲ್ಲುವ ನೆಪದಿಂದ ಮುಗ್ಧ ಮಕ್ಕಳನ್ನು, ಮಹಿಳೆಯರನ್ನು ಮತ್ತು ವೃದ್ಧರನ್ನು ಕೊಲ್ಲುತ್ತಿದ್ದಾರೆ ಹಾಗೂ ಇವೆಲ್ಲವೂ ಯುದ್ಧದಲ್ಲಿ ಸಾಮಾನ್ಯವೆಂದು ಬಹಳ ಅಹಂಕಾರದಿಂದ ಹೇಳಿಕೊಳ್ಳುತ್ತಾರೆ. ಯುದ್ಧದಲ್ಲಿ ನೇರವಾಗಿ ಭಾಗಿಯಾಗಿರದ ಯಾವನೇ ಧಾರ್ಮಿಕ ವ್ಯಕ್ತಿ, ಮಗು ಮತ್ತು ಮಹಿಳೆಯನ್ನು ಕೊಲ್ಲಬಾರದು ಎಂದು ಯುದ್ಧದ ವೇಳೆಯೂ ಹಝ್ರತ್ ಪೈಗಂಬರ್(ಸ) ಆದೇಶ ನೀಡುತ್ತಿದ್ದರು. ಒಟ್ಟಿನಲ್ಲಿ ಇದಾಗಿದೆ ಮುಹಮ್ಮದ್(ಸ)ರ ಮಾದರಿ ಮತ್ತು ಇಸ್ಲಾಮಿನ ಬೋಧನೆ.

(ಅದರ ನಂತರ ಹುಝೂರ್ ಸರಿಯ ರಜೀಅ್‌ನ ಪ್ರಸ್ತಾಪ ಮಾಡುತ್ತಾ ಹೀಗೆ ಹೇಳಿದರು:) ಇದು ದೀರ್ಘವಾದ ವಿವರಣೆಯಾಗಿದೆ. ಆದ್ದರಿಂದ ಇಂದು ಅದರ ಸ್ವಲ್ಪ ಭಾಗವನ್ನು ಮಾತ್ರ ಮುಂದಿರಿಸುತ್ತೇನೆ. ಈ ಕಾರ್ಯಾಚರಣೆ ಹಿಜರೀ 4, ಸಫರ್ ತಿಂಗಳ ಆರಂಭದಲ್ಲಿ ರಜೀಅ್‌ನ ಭಾಗದಿಂದ ನಡೆಯಿತು. ಸರಿಯ ರಜೀಅ್‌ನ ಕುರಿತು ನಮ್ಮ ರಿಸರ್ಚ್ ಸೆಲ್ ಒಂದು

ಟಿಪ್ಪಣಿಯನ್ನು ನೀಡಿದೆ. ಕೆಲವು ದಿನಾಂಕಗಳ ವ್ಯತ್ಯಾಸ ಕಂಡು ಬರುತ್ತಿದೆ. ಸರಿಯ ರಜೀಅ್‌ನ ತಾರೀಕು ಹಿಜರೀ 4, ಸಫರ್ ತಿಂಗಳೆಂದು ಬಹುತೇಕ ಚರಿತ್ರೆಗಾರರು ಬರೆದಿರುವರು. ಇದರ ವಿವರಣೆ ಹೀಗಿದೆ: ಹಝ್ರತ್ ಖುಬೈಬ್[ರ] ಮತ್ತು ಹಝ್ರತ್ ಝೈದ್[ರ]ರನ್ನು ಮಕ್ಕದಲ್ಲಿ ಸೆರೆ ಹಿಡಿಯಲಾಯಿತು. ಆದರೆ ಪರಿಶುದ್ಧ ತಿಂಗಳುಗಳು ಆರಂಭವಾದ ಕಾರಣದಿಂದ ಮಕ್ಕಾದವರು ಅವರನ್ನು ಬಂಧಿಯಾಗಿ ಇರಿಸಿದರು ಮತ್ತು ಪರಿಶುದ್ಧ ತಿಂಗಳುಗಳು ಕೊನೆಗೊಂಡಾಗ ಅವರಿಬ್ಬರನ್ನೂ ವಧಿಸಲಾಯಿತು. ಈ ಸರಿಯ ಹಿಜರೀ 4, ಸಫರ್ ತಿಂಗಳಲ್ಲಿ ನಡೆದಿತ್ತು ಎಂದು ಒಪ್ಪುವುದಾದರೆ, ಪರಿಶುದ್ಧವಾದ ತಿಂಗಳು ಆರಂಭವಾಗಿತ್ತು ಎಂದು ಹೇಳುವುದು ಅವಿವೇಕತನವಾಗಿದೆ. ಆದ್ದರಿಂದ ಈ **ಸರಿಯ** ಹಿಜರೀ 3, ಶವ್ವಾಲ್ ತಿಂಗಳ ಕೊನೆಯ ದಿನಗಳಲ್ಲಿ ನಡೆದಿತ್ತು ಎಂದು ಹೇಳುವುದು ಸರಿಯೆಂದು ತಿಳಿದುಬರುತ್ತದೆ. ಹಝ್ರತ್ ಖುಬೈಬ್[ರ] ಮತ್ತು ಹಝ್ರತ್ ಝೈದ್[ರ]ರನ್ನು ಹಿಜರೀ 4, ಸಫರ್ ತಿಂಗಳಲ್ಲಿ ಶಹೀದ್ ಮಾಡಲಾಗಿತ್ತು. ಅವರು ಶಹೀದ್ ಆದ ಸುದ್ದಿ ಮದೀನಕ್ಕೆ ತಲುಪಿದಾಗ ಯುದ್ಧ ನಡೆದದ್ದು ಸಫರ್ ತಿಂಗಳಲ್ಲಿ ಎಂಬ ವರದಿಗಳು ಕ್ರಮೇಣ ಹೆಚ್ಚು ಪ್ರಬಲವಾಯಿತು. ಹೇಗಿದ್ದರೂ ಅಲ್ಲಾಹನು ಬಲ್ಲನು.

ಈ ಸರಿಯದ ಕುರಿತು ಹೀಗೆ ಬರೆಯಲಾಗಿದೆ: ಬನೂ ಲಹ್‌ಯಾನಿನ ಸರದಾರನ ವಧೆಯ ಕಾರಣದಿಂದ ಆ ಗೋತ್ರವು ಪ್ರತೀಕಾರದ ಬೆಂಕಿಯಲ್ಲಿ ಉರಿಯುತ್ತಿತ್ತು ಮತ್ತು ಮುಸ್ಲಿಮರ ಮೇಲೆ ಸೇಡು ತೀರಿಸಲು ಯೋಚಿಸುತ್ತಿತ್ತು. ಹೀಗೆ ಒಂದು ಯೋಜನೆಯೊಂದಿಗೆ ಅಝ್ಲ್ ಮತ್ತು ಖಾರ ಗೋತ್ರಗಳ ಕೆಲವರು ಹಝ್ರತ್ ಪೈಗಂಬರ್[ಸ]ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ನಮ್ಮ ಗೋತ್ರದಲ್ಲಿ ಇಸ್ಲಾಂ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಆದ್ದರಿಂದ ಅಲ್ಲಿ ಇಸ್ಲಾಮಿನ ಸಂದೇಶ ತಲುಪಿಸುವ ಕೆಲಸವನ್ನು ಮಾಡಲು ನೀವು ನಿಮ್ಮ ಕೆಲವು ಜನರನ್ನು ನಮ್ಮ ಜೊತೆಗೆ ಕಳುಹಿಸಿರಿ. ಹಝ್ರತ್ ಪೈಗಂಬರ್[ಸ] ಅವರ ಜೊತೆಗೆ ಕೆಲವು ವ್ಯಕ್ತಿಗಳನ್ನು ಕಳುಹಿಸಿದರು. ಚರಿತ್ರೆಯ ಬಹುತೇಕ ಗ್ರಂಥಗಳಲ್ಲಿ 10 ಸಹಾಬಿಯರನ್ನು ಕಳುಹಿಸಲಾಗಿತ್ತು ಎಂಬ ಪ್ರಸ್ತಾಪವಿದೆ. ಆದರೆ ಕೇವಲ 7 ಸಹಾಬಿಯರ ಹೆಸರುಗಳ ಪ್ರಸ್ತಾಪ ಲಭಿಸುತ್ತದೆ. ಹಝ್ರತ್ ಪೈಗಂಬರ್[ಸ] ಆಸಿಮ್ ಬಿನ್ ಸಾಬಿತ್[ರ] ಅಥವಾ ಮುರ್‌ಸದ್[ರ]ರನ್ನು ಅವರ ಅಮೀರನ್ನಾಗಿ ಮಾಡಿದ್ದರು. ಈ ವಿಷಯ ಮುಂದುವರೆಯುವುದು.

(ಖುತ್ಬದ ಕೊನೆಯಲ್ಲಿ ದುಆಗಾಗಿ ಮನವಿ ಮಾಡುತ್ತಾ ಹುಝೂರ್ ಹೇಳಿದರು:) ಇಂದು ನಾನು ಪುನಃ ಯಮನಿನ ಬಂಧಿಗಳಿಗಾಗಿ ವಿಶೇಷವಾಗಿ ದುಆ ಮಾಡಲು ಹೇಳಬಯಸು ತ್ತೇನೆ. ವಿಶೇಷವಾಗಿ ಅಲ್ಲಿಯ ಲಜ್ನ ಸದರ್ ಸಹ ಆಗಿರುವ ಮಹಿಳೆಗಾಗಿ. ಅವರನ್ನು ಬಹಳ ಕಷ್ಟತೆಗೆ ಗುರಿಪಡಿಸಿ ಬಂಧನದಲ್ಲಿ ಇರಿಸಲಾಗಿದೆ. ಬೇರೆ ಕೆಲವರು ಕೂಡ ಇದ್ದಾರೆ. ಅವರ ಮಾತುಗಳನ್ನು ಅನುಸರಿಸಲು ತಯಾರಾಗದೇ ಇರುವವರನ್ನು ಬಂಧಿಸಲಾಗಿದೆ. ಅವರಿಗಾಗಿ ವಿಶೇಷವಾಗಿ ದುಆ ಮಾಡಿರಿ. ಅಲ್ಲಾಹನು ಅವರನ್ನು ಬಿಡುಗಡೆಗೊಳಿಸುವಂತೆ ಮಾಡಲಿ.

ಪಾಕಿಸ್ತಾನದಲ್ಲಿ ಸೆರೆಯಲ್ಲಿರುವವರಿಗಾಗಿಯೂ ದುಆ ಮಾಡಿರಿ. ಪೆಲಸ್ತೀನಿನ ಜನರಿಗಾಗಿಯೂ ದುಆ ಮಾಡುತ್ತಿರಿ. ಸ್ಥಿತಿಗತಿಗಳು ಉತ್ತಮಗೊಳ್ಳುವಂತೆ ಭಾಸವಾಗಿ ಪುನಃ ಕೆಟ್ಟು ಹೋಗುತ್ತಿವೆ. ಇಸ್ರೇಲ್ ಸರ್ಕಾರ ಅಹಂಕಾರದಿಂದ ವರ್ತಿಸುತ್ತಿದೆ. ಅಲ್ಲಾಹನು ಪೆಲಸ್ತೀನಿಯರನ್ನು ಇಸ್ರೇಲರ ಪೀಡನೆಯಿಂದ ಬೇಗನೇ ಮುಕ್ತಗೊಳಿಸಲಿ. ಮುಸ್ಲಿಮರಿಗೂ ತಮ್ಮ ಹಕ್ಕನ್ನು ಈಡೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis***[atba]
*At, **'Masjid Mubarak'**, Islamabad, Tilford, UK.* On 10-05-2024
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email****:* *khutuba.kannada@gmail.com*
**You can find all the Sermons archived at**: www.alislam.org/friday-sermon